**ಓ.ಎಸ್. ನಂ. 22 /2021** **ಪಿ.ಡಬ್ಲ್ಯೂ- 1(ರಂಗರಾಜು)**

**ಸಾಕ್ಷಿಯನ್ನು ದಿನಾಂಕ 24.06.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ದಾವಾಸ್ತಿಗೆ ಸಂಬಂಧಿಸಿದಂತೆ ಒಂದು ಡಿಮ್ಯಾಂಡ್ ರಿಜಿಸ್ಟರನ್ನು ಹಾಜರುಪಡಿಸಿದ್ದು ಅದನ್ನು ನಿಪಿ 49 ಎಂದು, ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 50 ರಿಂದ 53 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 3 ರಿಂದ 9 ರವರ ಪರ ವಕೀಲರಾದ ಶ್ರೀ ಜಿ ಎನ್ ಎನ್ ವಕೀಲರಿಂದಃ**

ನಿಪಿ 49 ರಂತೆ ಪ್ರತ್ಯೇಕವಾಗಿ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ 49 ದಾಖಲಾತಿಯು ಹೈರಿಗೆ ಗ್ರಾಮ ಪಂಚಾಯಿತಿ ಇದ್ದಂತಹ ಸಮಯದಲ್ಲಿ ಪಡೆದಂತಹ ದಾಖಲಾತಿ ಆಗಿರುತ್ತದೆ ಈಗ ಹೆಚ್ ಡಿ ಕೋಟೆ ಪುರಸಭೆಗೆ ಗ್ರಾಮವನ್ನು ಸೇರಿಸಲಾಗಿರುತ್ತದೆ ಮತ್ತು ಪ್ರತ್ಯೇಕವಾಗಿ ಖಾತೆಯು ಅವರ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 50 ರಿಂದ 53 ದಾಖಲಾತಿಗಳು 2024-25 ನೇ ಸಾಲಿನ ಪಹಣಿ ಪತ್ರಿಕೆಗಳು ಆಗಿರುತ್ತವೆ ಎಂದರೆ ಸರಿ. ನಿಪಿ 53 ರಲ್ಲಿ ತೋರಿಸಿರುವ ಸುರೇಂದ್ರ ಎಂಬುವವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ಮೃತ ಪ್ರತಿವಾದಿ 1 ಶಿವಲಿಂಗೇಗೌಡ ರವರು ಬದುಕ್ಕಿದ್ದಾಗಲೇ ಅವರ ಹೆಸರಿಗೆ ಖಾತೆಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಈ ಹಿಂದೇಯೇ ನಮ್ಮ ತಂದೆ ಮತ್ತು ಅವರ ಸಹೋದರರ ಮದ್ಯೆ ವಿಭಾಗವಾಗಿ ಖಾತೆಗಳು ಆಗಿದ್ದರು ಸಹ ಈಗ ಅಕ್ರಮವಾಗಿ ಲಾಭ ಪಡೆಯಲು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ 2 ರವರ ಪರ ವಕೀಲರಾದ ಶ್ರೀ ಹೆಚ್ ಜಿ ವಿ ವಕೀಲರಿಂದಃ**

ನಿಪಿ 49 ರಂತೆ ಶಿವರುದ್ರೇಗೌಡ, ಶಿವಣ್ಣೇಗೌಡ ಮತ್ತು ನಾರಾಯಣಗೌಡ ರವರ ಹೆಸರುಗಳು ಪ್ರತ್ಯೇಕವಾಗಿ ಇರುತ್ತವೆ ಎಂದರೆ ಸಾಕ್ಷಿಯು ಅವರೇ ಹಾಜರುಪಡಿಸಿದ ನಿಪಿ 49 ಅನ್ನು ನೋಡಿ ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ಯಾವಾಗ ತೆಗೆದುಕೊಳ್ಳಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯರಹಳ್ಳಿ ಗ್ರಾಮವು ಹೆಚ್ ಡಿ ಕೋಟೆ ಪುರಸಭೆಗೆ ಸೇರಿಸಿ 6 ವರ್ಷ ಆಗಿರುತ್ತವೆ ಎಂದರೆ ಸರಿ. ದಾವಾಸ್ತಿ ಸಂಬಂಧಿಸಿದಂತೆ ಇತ್ತೀಚಿನ ದಾಖಲಾತಿ ಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಿಪಿ 51 ರಂತೆ ನಾರಾಯಣ ಗೌಡ ರವರ ಹೆಸರಿಗೆ ಪ್ರತ್ಯೇಕವಾಗಿ ಖಾತೆಯು ದಿಃ 16.03.2012 ರಂದು ಆಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ಅವರ ಸಹೋದರರು ಇದ್ದಾಗಲೇ ವಿಭಾಗವಾಗಿದ್ದರೂ ಸಹ ಅಕ್ರಮ ಲಾಭ ಪಡೆಯಲು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ